ಮಾಡುವುದಿದೆ'.

'ಪೋರ್ಟಿಕೋನಲ್ಲಿ ಇದಿಯಲ್ಲ ಆ ಜೀಪು...'

'ನಮ್ಮ ಮ್ಯಾನೇಜರ್ ಚಂದ್ರನ್ ಅವರು ಯೂಸ್ ಮಾಡ್ತಾರೆ...'

'ಚಂದ್ರನ್ ಯಾವ ರೀತಿ...'

'ಸ್ವಲ್ಪ ಡ್ರಿಂಕ್ಸ್ ಪ್ರಾಬ್ಲಂ ಇದೆ. ಅದು ಬಿಟ್ರೆ ಪರವಾಗಿಲ್ಲ'.

'ರವಿಯವರು ಯಾವ ಗಾಡಿ ಡ್ರೈವ್ ಮಾಡ್ತಾರೆ?'

'ಅವನದು ಒಂದು ಬೈಕ್ ಇದೆ'.

'ಸೋಮವಾರ ರವಿಯವರು ಬೆಂಗಳೂರಿಗೆ ಹೋಗಿದ್ರಾ?'

'ಅವನು ಯಾವಾಗ, ಎಲ್ಲಿಗೆ ಬಂದು ಹೋಗ್ತಾನೆ ಅಂತ ಯಾರಿಗೂ ಗೊತ್ತಿರಲ್ಲ'

'ನಿಮ್ಮ ಮಕ್ಕಳಾ... ತುಂಬಾ ಚೂಟಿಯಾಗಿದ್ದಾರೆ...'

'ಹೌದು'.

ಒಳಗಿನ ಊಟದ ಕೋಣೆಯಿಂದ ಪದೇ ಪದೇ ಕುತೂಹಲದಿಂದ ಇಣುಕುತ್ತಿದ್ದ ಸುಮಾರು ಹತ್ತನ್ನೆರಡು ವರ್ಷದ ವಿಜಯಮ್ಮನವರ ಇಬ್ಬರು ಮಕ್ಕಳನ್ನು ಕರೆದು, ಅವರಿಗೋಸ್ಕರ ತಂದ ಚಾಕ್ಲೇಟ್ ಕೊಟ್ಟು, ಎಲ್ಲರಿಗೂ ವಿದಾಯ ಹೇಳಿ ಮಡಿಕೇರಿ ಪೊಲೀಸ್ ಠಾಣೆಗೆ ವಾಪಸ್ ಬಂದಿದ್ದ ಮಾಯಣ್ಣ.

'ಏನಾಯಿತು ಮಾಯಣ್ಣನವರೇ...'

'ಪೂವಯ್ಯ, ನನಗೆ ಒಂದು ಸಹಾಯ ಬೇಕು'.

'ಹೇಳಿ ಮಾಯಣ್ಣ'.

'ಕೆಎ 12 ವೆಹಿಕಲ್ಸ್ ಮಡಿಕೇರಿ ರಿಜಿಸ್ಟ್ರೇಷನ್ ಅಲ್ವ ಪೂವಯ್ಯ?'

'ಹೌದು...'

'ಒಂದು ಬಿಳಿ ಬಣ್ಣದ ಕಾರ್ಗೋ ಜೀಪ್, ಅದರ ಮುಂದಿನ ಬಂಪರ್ ಮೇಲೆ ಕೆಂಪು ಪೇಂಟಲ್ಲಿ 'ಕೊಡಗಿನ ಕಾವೇರಿ' ಎಂದು ಬರೆದಿದೆ. ಅದು ಇಲ್ಲಿನದೇ. ಅದನ್ನ ಟ್ರೇಸ್ ಮಾಡಬೇಕಲ್ಲ. ನಮ್ಮ ಫೋರೆನ್ಸಿಕ್ ಫೋಟೊಗ್ರಾಫರ್ ಪ್ರಕಾರ ಟೈರ್ ವಿಡ್ತ್ 215. ಆ ವಿಡ್ತ್‌ನಲ್ಲಿ ಕಮರ್ಷಿಯಲ್ ವೆಹಿಕಲ್ ಅಂದ್ರೆ ಬೊಲೆರೋ ಒಂದೇ... ಮಿಕ್ಕಿದ್ದೆಲ್ಲಾ ಪ್ಯಾಸೆಂಜರ್ ಕಾರುಗಳು'.

ಅಮ್ಮು ಅವರ ಎಸ್ಟೇಟ್ ತೋರಲು ಬಂದಿದ್ದ ಲೇಡಿ ಪೀಸಿ–

'ಸಾರ್, ಅದು ತಗ್ಗಿನ ಮನೆಯ ಕುಟ್ಟಪ್ಪನವರ ಮಗ ವಿನೋದ್‌ದಿರಬಹುದು...'

'ಪೂವಯ್ಯ ನಾನು ಅಮ್ಮು ಅವರ ಪಕ್ಕದ ಎಸ್ಟೇಟಿನ ಎಕ್ಸ್ ಜಡ್‌ಪಿ ಮೆಂಬರ್ ಗಣಪತಿಯವರನ್ನ ನೋಡಿ ಬರ್ತೀನಿ... ಅಷ್ಟರಲ್ಲಿ ಅವನನ್ನ ಅದೇ ಜೀಪಲ್ಲಿ ಬರಹೇಳಿ'.

'ಆಯ್ತು ಮಾಯಣ್ಣ...'

ಮಾಯಣ್ಣ, ವಿನಯ್ ಮತ್ತು ಭುಜಂಗನೊಡನೆ, ಗಣಪತಿ ಅವರ ಬಂಗಲೆಯ ಮುಂದೆ ನಿಂತಿದ್ದ. ಧಾರಾಳವಾಗಿ ದುಡ್ಡು ಸುರಿದು ಕಟ್ಟಿದ್ದ ದೊಡ್ಡ ಮನೆ, ಆದರೆ ಬಣ್ಣದಲ್ಲಾಗಲೀ ವಾಸ್ತುಶಿಲ್ಪ ವಿನ್ಯಾಸದಲ್ಲಾಗಲೀ ಸುತ್ತಲಿನ ಹಸಿರು ದಟ್ಟಣೆಗೆ ಸ್ವಲ್ಪವೂ ಹೊಂದಿಕೊಳ್ಳದ ಆ

## ಕಳೆದ ಸಂಚಿಕೆಯಲ್ಲಿ



ಅಮ್ಮುವಿನ ಕೊಲೆಯಾಗಿ ಮೂರು ದಿನಗಳಾದರೂ ತನಿಖೆಯ ಜಾಡು ಸ್ಪಷ್ಟ ಹಾದಿ ಹಿಡಿಯದಿದ್ದುದು ಮಾಯಣ್ಣನನ್ನು ಕೊಂಚ ಅಧೀರನನ್ನಾಗಿಸಿತ್ತು. ಎಲ್ಲ ಸಾಕ್ಷ್ಯಗಳನ್ನೂ ಎದುರಿಗಿಟ್ಟುಕೊಂಡು, ಸಾಧ್ಯತೆಗಳ ಬಗ್ಗೆ ಯೋಚಿಸತೊಡಗಿದ. ಜಾಹ್ನವಿಯ ವಿಚಾರಣೆಗೆಂದು ಹೋದ ಮಾಯಣ್ಣನಿಗೆ ಆಕೆಯಿಂದ ಯಾವ ಉಪಯೋಗವೂ ಆಗಲಿಲ್ಲ. ಪ್ರೀತಿ ಹಾಗೂ ಸಾಂಗತ್ಯಕ್ಕೆ ತಹತಹಿಸುತ್ತಿದ್ದ ಆಕೆಯ ಸೆಳವಿನಿಂದ ಪಾರಾಗಲು ಮಾಯಣ್ಣ ಹರಸಾಹಸ ಪಡಬೇಕಾಯಿತು. ಸಿತಾರಗೆ ಅಮ್ಮು ಬರೆದ ಪತ್ರ ದೊರೆತು, ಮತ್ತೊಂದು ಸಾಕ್ಷ್ಯವಾಗಿ ಪರಿಣಮಿಸಿತು. ಕಾಫಿ ಎಸ್ಟೇಟ್ ಮಾಲೀಕ ಗಣಪತಿ ಎನ್ನುವ ವ್ಯಕ್ತಿಯ ಹೋಂ ಸ್ಟೇ ಪ್ರಾಜೆಕ್ಟ್‌ಗೆ ಜಾಗ ಬಿಟ್ಟುಕೊಡಲು ಒಪ್ಪದ ಕಾರಣಕ್ಕಾಗಿ ಅಮೃತಾ ಬೆದರಿಕೆ ಎದುರಿಸಬೇಕಾಗಿ ಬಂದುದು ಬೀರಪ್ಪ ಎನ್ನುವ ಯುವಕನಿಂದ ತಿಳಿಯಿತು. ಕೊಲೆಯ ನಂತರ ಜಯಂತ್ ನಾಪತ್ತೆಯಾಗಿದ್ದ. ಮಡಿಕೇರಿಯಲ್ಲಿನ ಅಮ್ಮು ಎಸ್ಟೇಟ್‌ಗೆ ಭೇಟಿ ಕೊಡಲು ಮಾಯಣ್ಣ ನಿರ್ಧರಿಸಿದ.

ಕಟ್ಟಡ, ಗಣಪತಿಯವರ ಅಭಿರುಚಿಹೀನತೆಯನ್ನು ತೋರುತ್ತಿತ್ತು. ಬಾಗಿಲ ಬದಿಗೆ ಕಟ್ಟಿದ್ದ, ಕೊಬ್ಬಿದ ತೋಳಗಳಂತಿದ್ದ ಎರಡು ಜರ್ಮನ್ ಶೆಫರ್ಡ್ ನಾಯಿಗಳು, ಆಕಾಶ ಕಳಚಿ ಬಿದ್ದಂತೆ ಬೊಗಳಲು ಒಳಗಿನಿಂದ, ಪೊಗದಸ್ತಾಗಿ ಬೆಳೆದಿದ್ದ ವ್ಯಕ್ತಿಯೊಬ್ಬ ಹೊರಬಂದು, ಯೂನಿಫಾರ್ಮ್‌ನಲ್ಲಿದ್ದ ಪೊಲೀಸರನ್ನು ಕಂಡು ತುಸು ಚಕಿತನಾಗಿ–

'ನಾನು ಸುಬೇದಾರ್ ನಾಚಯ್ಯ... ಯಾರು ಬೇಕಿತ್ತು?'

ಮಾಯಣ್ಣ ತನ್ನ ಪರಿಚಯ ಮತ್ತು ಬಂದ ಕೆಲಸ ಹೇಳಿ ಕಳುಹಿಸಿದ. ಮತ್ತೆ ಒಳಗೋಗಿ ಗಣಪತಿಯ ಒಪ್ಪಿಗೆ ಪಡೆದು ಬಂದಂತೆ, ಮಾಯಣ್ಣ ಮತ್ತು ಈರ್ವರು ಪೇದೆಗಳನ್ನು, ವಿಶಾಲವಾದ ನಡು ಮನೆಗೆ ಕರೆದೊಯ್ದು, ಪಕ್ಕಕ್ಕೆ ತಾನೂ ಕೈಕಟ್ಟಿ ನಿಂತ. ಹಗಲಲ್ಲೇ ಕೈಯಲ್ಲಿ ರಮ್ ಗ್ಲಾಸ್ ಹಿಡಿದು, ದೊಡ್ಡ ಸೋಫಾದ ಮೇಲೆ, ಪೂರ್ತಿ ತುಂಬಿಕೊಂಡಂತೆ ಕುಳಿತಿದ್ದ ದಢೂತಿ ದೇಹದ ಗಣಪತಿ. ಬೊಕ್ಕ ತಲೆ ಎಂದು ಕರೆಯದಿರಲು ಎಷ್ಟೋ ಅಷ್ಟು ಮಾತ್ರ ಕೂದಲು. ದಿನ ಪೂರ್ತಿ ಕುಡಿಯುತ್ತಾ ತಿನ್ನುತ್ತಾ ಕಳೆಯುವ ಅಶಿಸ್ತಿನ ಜೀವನ, ಎಲ್ಲಾ ಕಲಸಿಕೊಂಡಂತೆ ಕಾಣುವ ಮುಖದಲ್ಲಿ ಪ್ರೇತಕಳೆಯಾಗಿ ತೋರುತ್ತಿತ್ತು, ಅದರಲ್ಲಿ ದಪ್ಪ, ತಿವಿಯುವಂಥ ಕಣ್ಣುಗಳಷ್ಟೇ ಪ್ರಖರವಾಗಿತ್ತು. ಕುಳಿತಲ್ಲಿಂದಲೇ, ಮಾಯಣ್ಣನ ತಂಡಕ್ಕೆ, ಕಣ್ಣಲ್ಲೇ ಕೂರಲು ಸೂಚಿಸುತ್ತಾ, ಇನ್ನೊಂದು ಕೈಯಲ್ಲಿ ಹಿಡಿದ ಪತ್ರಿಕೆಯನ್ನು ಕೆಳಕ್ಕೂ ಇಳಿಸದೆ, ಬಾಗಿದ ತಲೆ ಮೇಲೂ ಎತ್ತದೆ, ಹಾಕಿದ್ದ ಕನ್ನಡಕ ಮೇಲಿನ ಸಂದಿಯಿಂದ ಪ್ರಶ್ನಾರ್ಥಕವಾಗಿ ಮಾಯಣ್ಣನ ಕಡೆ ನಿಟ್ಟಿಸಲು ಮಾಯಣ್ಣ–

'ನಾನು ಬೆಂಗಳೂರಿನ ಜೆ ಜೆ ನಗರ ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಮಾಯಣ್ಣ, ಅಮ್ಮು ಅವರ ಕೊಲೆಯ ಬಗ್ಗೆ ಮಾತಾಡಲು ಬಂದಿದ್ದೇವೆ...'

'ಮಾತಾಡಿ, ಅದಕ್ಕೆ ಮುಂಚೆ ನಮ್ಮ ಕೊಡಗಿನ ಆತಿಥ್ಯ ಸ್ವೀಕರಿಸಿ... ಪನ್ನಿಕರಿ ವಿತ್ ರಮ್. ನಾಳೆಯಿಂದ ಇಂಥದ್ದೆಲ್ಲ ನನಗೂ ಇಲ್ಲ, ನಿಮಗೂ ಆಫರ್ ಮಾಡಕ್ಕಾಗುವುದಿಲ್ಲ'

ಗಣಪತಿಯ ಆಹ್ವಾನವನ್ನು ಅಲಕ್ಷಿಸಿದಂತೆ–

'ನಿಮಗೆ ಮತ್ತು ಅಮ್ಮು ಅವರಿಗೆ ಏನು ಜಗಳ ಆಗಿದ್ದು, ಆ ದಿನ... ಯಾವ ಕಾರಣಕ್ಕೆ ಅವರಿಗೆ ನೀವು ಆಕೆಗೆ ಕೊಲೆ ಬೆದರಿಕೆ ಹಾಕಿದ್ದು?'

'ಊಂ... ಅದು... ಹೇಳಿ...'

'ಇಲ್ಲಿ ನಾವು ಬಂದಿರೋದು ಹೇಳೋದಕ್ಕಲ್ಲ, ಕೇಳೋದಕ್ಕೆ'.

'ಹೇಳೋದಿಲ್ಲಾ ಅಂದ್ರೆ...'

'ನಮಗೆ ನಮ್ಮದೇ ದಾರಿಗಳಿವೆ.... ಬೇಕಾ ಅದೆಲ್ಲ?'

ಜೋರಾಗಿ ನಗುತ್ತಾ,

'ನಿಜವಾಗಲೂ... ಟ್ರೈ ಮಾಡಿ... ನೋಡೋಣ'.

ಗಣಪತಿಯ ಕೈ ತನ್ನ ಪಕ್ಕದಲ್ಲಿ ಏನನ್ನೋ ತಡಕಾಡುತ್ತಿತ್ತು. ಅಷ್ಟರಲ್ಲಿ ಪಕ್ಕದಲ್ಲೇ ನಿಂತಿದ್ದ ನಾಚಯ್ಯ, 'ಸಾರ್ ಒಂದು ನಿಮಿಷ ದಯವಿಟ್ಟು ಈ ಕಡೆ ಬನ್ನಿ... ಪ್ಲೀಸ್... ಒಂದೇ ನಿಮಿಷ' ಎಂದು ಗೋಗರೆಯಲು, ಹೊರನಡೆದ ಅವನನ್ನು ಮಾಯಣ್ಣ ಹಿಂಜರಿಯುತ್ತಲೇ ಹಿಂಬಾಲಿಸಿದ. ಭುಜಂಗನೂ ಅವರನ್ನು ಹಿಂಬಾಲಿಸಿದ. ಮೂವರು ಮನೆಯ ಹೊರ ಅಂಗಳಕ್ಕೆ ಬಂದಂತೆ, 'ನಾನು ಗಣಪತಿಯವರ ಅಕ್ಕನ ಮಗ... ಡ್ಯೂಟಿಗೆ ರಜ ಹಾಕಿ ಬಂದಿದ್ದೇನೆ, ಸದ್ಯಕ್ಕೆ ನಾನೆ ಅವರ ಕೇರ್ ಟೇಕರ್... ಬೆಳಗ್ಗಿನಿಂದಲೇ ಕುಡಿಯೋದಕ್ಕೆ ಕುಂತಿದ್ದಾರೆ... ಇವತ್ತು ಒಂದು ದಿನ ದಯವಿಟ್ಟು ಅವರನ್ನು ಬಿಟ್ಟು ಬಿಡಿ'.

'ಯಾಕೆ... ಎಂತೆಂಥ ಪೊಗರಿನ ಪುಡಾರಿಗಳನ್ನ ಪಳಗಿಸಿದ್ದೀವಿ... ಇವನ್ಯಾವ ಲೆಕ್ಕ?'

'ಸರ್, ಅದು ಹಾಗಲ್ಲ... ಇವತ್ತು ಅವರು ಕೋಟ್ಯಧಿಪತಿ. ನಾಳೆಯಿಂದ ಹೊತ್ತೊತ್ತಿನ ತುತ್ತಿಗೆ ಮಾತ್ರ...'

'ಏನ್ರೀ ಅದು?'

'ನೀವು ವಿಚಾರಣೆ ಮಾಡಿ ಸತ್ಯ ತಿಳಿಯಬೇಕಾಗಿದೆ... ದಯವಿಟ್ಟು ತಾಳ್ಮೆ ಕಳೆದುಕೊಳ್ಳಬೇಡಿ... ಪ್ಲೀಸ್'.

ಮಾಯಣ್ಣನಿಗೆ ಏನೋ ಎಲ್ಲಾ ನಿಗೂಢ